ಒಂದು ಗಂಟೆ ಬೇಕಾಗುತ್ತದೆ. ಅದಕ್ಕೋಸ್ಕರ ಈ ಪ್ರಶ್ನೆಗಳೆಲ್ಲವನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ. ಇದನ್ನು ಲ್ಯಾಪ್ಸ್ ಆಗದ ರೀತಿಯಲ್ಲಿ ಮತ್ತೆ ಅವಕಾಶ ಕೊಡುತ್ತೇನೆಂದು ನಾನು ಪ್ರಾಮಿಸ್ ಮಾಡುತ್ತೇನೆ. ಈಗಾಗಲೇ ಪ್ರಶ್ನೋತ್ತರಕ್ಕಾಗಿಯೇ ಎರಡು ಗಂಟೆಗಳ ಕಾಲಾವಕಾಶವಾಗಿದೆ. ಆದ್ದರಿಂದ, ತಾವೆಲ್ಲರೂ ದಯವಿಟ್ಟು ಒಪ್ಪಿಕೊಳ್ಳಬೇಕು. ಹಾಗೆಯೇ, I request the members to restrain from zero hours to-day.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹಂಪನಗೌಡ ಬಾದರ್ಲಿಯವರು ಒಂದು ಪ್ರಮುಖ ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಇದ್ದಾರೆ. ಆದ್ದರಿಂದ, ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು : ಮತ್ತೆ ಎಲ್ಲರಿಗೂ ಅವಕಾಶ ಕೊಡಬೇಕಾಗುತ್ತದೆ. ಮಾನ್ಯ ಚಂದ್ರೇಗೌಡರೇ, ಈಗ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸದನದ ಮುಂದೆ ಮಂಡಿಸಿ. I will take the sense of the House. ಏಕೆಂದರೆ, ಇನ್ನು 26 ಜನ ಬೇಡಿಕೆಯ ಮೇಲೆ ಮಾತನಾಡುವವರಿದ್ದಾರೆ.

ಶ್ರೀ ಹಂಪನಗೌಡ ಬಾದರ್ಲಿ : ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿದೆ. ಇದರ ಬಗ್ಗೆ ನಾನು ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಸ್ವಲ್ಪ ತಡೆಯಿರಿ. ಮಾನ್ಯ ಮಂತ್ರಿಯವರಿಗೆ ಲಿಖಿತದ ಮೂಲಕ ಉತ್ತರಿಸುವ ಪ್ರಶ್ನೆಯನ್ನು ಮಂಡಿಸುವುದಕ್ಕೆ ಸೂಚಿಸಿದ್ದೇನೆ. ನಾನು ಹೇಳುವಂಥದ್ದು ನಿಮಗೆ ಕೇಳಿಸುವುದಿಲ್ಲವೆ?

(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತದ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 24.7.2003ರ ಲಿಖಿತ ಮೂಲಕ ಉತ್ತರಿಸುವ 72 ಪ್ರಶ್ನೆಗಳ ಪೈಕಿ 65 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ. * **(ಅನುಬಂಧ-1)**

ಅಧ್ಯಕ್ಷರು : ಮಂಡಿಸಲಾಯಿತು.

2) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಶೂನ್ಯವೇಳೆಯಲ್ಲಿ ಪ್ರಾಮುಖ್ಯ ವಿಷಯಗಳ ಪ್ರಸ್ತಾಪ

ಅಧ್ಯಕ್ಷರು : ಈಗ ಶೂನ್ಯವೇಳೆ ತೆಗೆದುಕೊಳ್ಳಬೇಕೇ ಅಥವಾ ಬೇಡವೇ ಎನ್ನತಕ್ಕಂಥದ್ದನ್ನು I want to take the sense of the House.ಒಂದು ಸಲ ಪ್ರಾರಂಭ ಮಾಡಿದ ಮೇಲೆ ಕನಿಷ್ಟ ಪಕ್ಷ ಒಂದು ಗಂಟೆಯಾದರೂ ಆಗುತ್ತದೆ. ಆದ್ದರಿಂದ, I want to take the sense of the House.

ಶ್ರೀ ಹಂಪನಗೌಡ ಬಾದರ್ಲಿ : ನಮ್ಮ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳಷ್ಟಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಸಿನಿಮಾ ಸೇವಾ ಶುಲ್ಕದ ಬಗ್ಗೆ ಮತ್ತು ಜಯದೇವ ಆಸ್ಪತ್ರೆಯಲ್ಲಿ ಔಷಧಿ ಸಿಗದೇ ಇರತಕ್ಕಂಥ ಬಹಳ ಪ್ರಮುಖ ಹಾಗೂ ತುರ್ತು ವಿಷಯವಾಗಿರುವುದರಿಂದ ಸದರಿ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಬೇಡಿಕೆ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಿ.

---

* ಅನುಬಂಧ-1

ಶ್ರೀ ಜಗದೀಶ್ ಶೆಟ್ಟರ್ : ಸಿನಿಮಾ ಸೇವಾ ಶುಲ್ಕದ ಬಗ್ಗೆ ಈಗಾಗಲೇ ಚರ್ಚೆ ಆಗುತ್ತಿದೆ. ಮತ್ತೆ ಇವತ್ತು ಸಾಯಂಕಾಲ ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಳ್ಳುತ್ತಾರೆಂದು ತಿಳಿದು ಬಂದಿದೆ.

ಅಧ್ಯಕ್ಷರು : ಮಾನ್ಯ ಹಂಪನಗೌಡ ಬಾದರ್ಲಿಯವರೇ, ನಿಮಗೆ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಮೊದಲು ಅವಕಾಶ ಕೊಡುತ್ತೇನೆ. ಆ ಸಂದರ್ಭದಲ್ಲಿ ತಾವು ಈ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಹಂಪನಗೌಡ ಬಾದರ್ಲಿ : ತುಂಗಭದ್ರ ಎಡದಂಡೆ ಕಾಲುವೆ ಒಡೆದು ನಮ್ಮ ಜಿಲ್ಲೆಯ ಐದಾರು ಪಟ್ಟಣಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗಿದೆ. ಮತ್ತೆ ರೈತರ ಭೂಮಿಗೂ ಕೂಡ ನೀರಿಲ್ಲದಂತ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಇನ್ನು 26 ಜನ ಮಾತನಾಡುವವರಿದ್ದಾರೆ; ಆದ್ದರಿಂದ ಯಾರಿಗೆ ಕೊಡಲಿ ಅಥವಾ ಯಾರಿಗೆ ಬಿಡಲಿ?

ಶ್ರೀ ಎಸ್.ಸುರೇಶ್‌ಕುಮಾರ್ : ತಾವು ಹೇಳತಕ್ಕಂಥದ್ದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ಬೇಡಿಕೆ ಮೇಲೆ ಚರ್ಚೆ ಮಾಡುವಾಗ ಇದನ್ನು ಮಾಡಬಹುದು.

ಶ್ರೀ ಬಿ.ಸೋಮಶೇಖರ್ : ಒಂದೊಂದು ಪಕ್ಷದವರಿಗೆ 5 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ.

ಆ) ವಿಷಯ:– ತುಂಗಭದ್ರ ಎಡದಂಡೆ ಕಾಲುವೆ ಒಡೆದು ಉಂಟಾಗಿರುವ ನೀರಿನ ಸಮಸ್ಯೆ ಬಗ್ಗೆ

ಶ್ರೀ ಹಂಪನಗೌಡ ಬಾದರ್ಲಿ(ಸಿಂಧನೂರು) : ಮಾನ್ಯ ಅಧ್ಯಕ್ಷರೆ, ತುಂಗಭದ್ರ ಎಡದಂಡೆ ನಾಲೆಯ ಕಾಲುವೆಯು ಗಂಗಾವತಿ ಮತ್ತು ಸಿಂಧನೂರು ಮತ್ತು ಮಾನ್ವಿ ತಾಲ್ಲೂಕುಗಳಲ್ಲಿ ಅಂದರೆ ಒಟ್ಟು ನಾಲ್ಕು ಕಡೆ ಎಡದಂಡೆ ಕಾಲುವೆ ಒಡೆದು ಹೋಗಿದ್ದರಿಂದ ಕುಡಿಯುವ ನೀರಿನ ಸಮಸ್ಯೆ ಮತ್ತು ರೈತರ ಸುಮಾರು 6 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಕಲ್ಪಿಸಿ ಕೊಡುವುದಕ್ಕೆ ತೊಂದರೆ ಆಗಿದೆ. ಈ ಸಂದರ್ಭದಲ್ಲಿ ನಾನು ಭಾರಿ ನೀರಾವರಿ ಸಚಿವರಲ್ಲಿ ಒತ್ತಾಯ ಮಾಡುವುದು ಏನೆಂದರೆ, 15 ದಿವಸದೊಳಗೆ ಎಡದಂಡೆ ಕಾಲುವೆಯನ್ನು ಭದ್ರಗೊಳಿಸುವ ಕೆಲಸವನ್ನು ಕೈಗೆತ್ತಿಕೊಂಡು ತೀವ್ರಗತಿಯಲ್ಲಿ ಸದರಿ ಕೆಲಸವನ್ನು ಮುಗಿಸುವಂಥ ಕೆಲಸ ಆಗಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಸಿಂಧನೂರು ಪಟ್ಟಣಕ್ಕೆ ನಾಲ್ಕೈದು ತಿಂಗಳ ಕಾಲ ಕುಡಿಯುವ ನೀರನ್ನು ಸ್ಟೋರೇಜ್ ಮಾಡತಕ್ಕಂಥ ವ್ಯವಸ್ಥೆ ಇದೆ. ಇದಕ್ಕೆ ಎಡದಂಡೆ ಕಾಲುವೆಯ ಮೂಲಕವೇ ನೀರು ಬರಬೇಕಾಗುತ್ತದೆ. ಬೇರೆ ಯಾವ ಕಡೆಯಿಂದಲೂ ಕೂಡ ನೀರು ಸಿಗುವುದಿಲ್ಲ. ಮತ್ತೆ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದರೂ ಕೂಡ ಸಿಹಿ ನೀರು ಸಿಗುವುದಿಲ್ಲ. ಮತ್ತೆ ಹಳ್ಳದಲ್ಲಿಯೂ ಕೂಡ ನೀರಿಲ್ಲ. ಒಂದು ಲಕ್ಷ ಜನಸಂಖ್ಯೆ ಇರತಕ್ಕಂಥ ಮಾನ್ವಿ, ಸಿಂಧನೂರು, ಗಂಗಾವತಿ ಮತ್ತು ರಾಯಚೂರು ತಾಲ್ಲೂಕುಗಳ ಜನರಿಗೆ ಕುಡಿಯುವ ನೀರಿನ ತೊಂದೆ ಆಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡುವುದಕ್ಕೆ ನನಗೂ ಕೂಡ ಅವಕಾಶ ಕೊಡಬೇಕು.

ಅಧ್ಯಕ್ಷರು : ಈ ವಿಷಯದ ಬಗ್ಗೆ ಮಾತನಾಡುತ್ತೇನೆಂದು ತಾವು ನನಗೆ ಬರೆದು ತಿಳಿಸಿಲ್ಲ. ಆದ್ದರಿಂದ ತಾವು ಮಾತನಾಡುವುದಕ್ಕೆ ಹೋಗಬೇಡಿ. ಅಂಥ ಸನ್ನಿವೇಶ ಇದ್ದರೆ ಮೊದಲೇ ನನಗೆ ಬರವಣಿಗೆಯ ಮೂಲಕ ತಿಳಿಸಬೇಕಾಗಿತ್ತು.